## ಮದ್ಯವ್ಯಸನ ಹಾಸ್ಯದ ವಸ್ತುವೇ?

ಝೀ ಕನ್ನಡ ವಾಹಿನಿಯಲ್ಲಿ ಅತ್ಯಂತ ಜನಪ್ರಿಯ ಕಾರ್ಯಕ್ರಮ 'ಡ್ರಾಮಾ ಜೂನಿಯರ್ಸ್' ಮುಗಿಯುತ್ತಿದ್ದಂತೆ ಈಗ ಹಾಸ್ಯ ಧಾರಾವಾಹಿ ರೂಪದಲ್ಲಿ 'ಕಾಮಿಡಿ ಕಿಲಾಡಿಗಳು' ಬರುತ್ತಿದ್ದಾರೆ. ತಮ್ಮ ಶಕ್ತ್ಯಾನುಸಾರ ಪ್ರೇಕ್ಷಕರನ್ನು ನಗಿಸಲು ಪ್ರಯತ್ನಿಸುತ್ತಿರುವುದು ಶ್ಲಾಘನೀಯ. ಜೀವನದಲ್ಲಿ ನಡೆಯುವ ಅನೇಕ ಘಟನೆಗಳು, ಸನ್ನಿವೇಶಗಳು ಹಾಸ್ಯದ ಹೊನಲಾಗಿರುತ್ತವೆ. ಅವುಗಳನ್ನು ಗುರುತಿಸುವ ಮನಸ್ಸು ಮತ್ತು ಪ್ರಯತ್ನ ನಮ್ಮದಾಗಿರಬೇಕು. ಈ ದಿಶೆಯಲ್ಲಿ ನಿರ್ದೇಶಕರಲ್ಲಿ ಒಂದು ಮನವಿ. ಮದ್ಯವ್ಯಸನದ ವಿಷಯವನ್ನು ಹಾಸ್ಯಕ್ಕಾಗಿ ಬಳಸಿಕೊಳ್ಳುವುದು ಬೇಡ. ಕೆಲವು ಸಲ ಈ ವ್ಯಸನ ಜೀವನಕ್ಕೆ ಅನಿವಾರ್ಯ ಎಂಬ ಭಾವನೆಯನ್ನು ಮೂಡಿಸಬಹುದು. ಅದರಂತೆ ಅಂಗವಿಕಲತೆಯನ್ನು ಬಳಸಿಕೊಳ್ಳದಂತೆ ಜಾಗ್ರತೆ ವಹಿಸುವುದು ಅವಶ್ಯಕ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಪ್ರಬುದ್ಧತೆ ಇಲ್ಲ

ಧಾರಾವಾಹಿ ಅಥವಾ ರಿಯಾಲಿಟಿ ಶೋ ಸಮಾಜಕ್ಕೆ ಏನನ್ನಾದರೂ ಸಾರುವಂತಿರಬೇಕು. ಸಮಾಜದ ಓರೆಕೋರೆಗಳನ್ನು ಎತ್ತಿ ಹಿಡಿದು ವೀಕ್ಷಕರನ್ನು ಚಿಂತನೆಗೆ ಹಚ್ಚಬೇಕು. ಬಿಗ್ ಬಾಸ್ ಕಾರ್ಯಕ್ರಮ ಸಮಾಜಕ್ಕೆ ವೀಕ್ಷಕರಿಗೆ ಏನನ್ನು ಸಾರ ಹೊರಟಿದೆ? ಅಥವಾ ರಾಜ್ಯದ ಯಾವ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸಮಸ್ಯೆಗಳಿಗೆ ಏನಾದರೂ ಪರಿಹಾರ ಸೂಚಿಸುತ್ತಿದೆಯೇ? ಉತ್ತರ ಸೊನ್ನೆ. ಊಟ, ತಿಂಡಿ, ನೀರು ಪ್ರತಿಯೊಂದಕ್ಕೂ ಜಗಳವಾಡುವ, ಕೆಲಸಕ್ಕೆ ಬಾರದ ಮಕ್ಕಳ ಆಟ ಆಡಿಸುವುದು, ಕೋಳಿ ಮೊಟ್ಟೆ ಹಿಡಿಯುವುದು ಒಂದು ಆಟವೇ? ಅದೇ ಮೊಟ್ಟೆಗಳನ್ನು ಬಡ ಮಕ್ಕಳಿಗೆ ಹಂಚಬಹುದಿತ್ತು. ಪ್ರಬುದ್ಧತೆ ಎನ್ನುವುದು ಯಾರಲ್ಲಾದರೂ ಇದೆಯೆ? ಬಿಗ್ ಬಾಸ್ ಕಾರ್ಯಕ್ರಮಕ್ಕೆ ಅಂತ್ಯ ಕಾಣಿಸಿದರೆ ವಸ್ತುಗಳನ್ನು ದಂಡ ಮಾಡುವುದಾದರೂ ಉಳಿಯುತ್ತದೆ. ವೀಕ್ಷಕರೂ ಸಮಾಧಾನದ ನಿಟ್ಟುಸಿರು ಬಿಡಬಹುದು.

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ನೈಜ ಕಥೆಯ ಅನಾವರಣ

ಕಲರ್ಸ ಕನ್ನಡದ 'ಮನೆ ದೇವರು' ಧಾರಾವಾಹಿಯನ್ನು ಮನೆ ಮಂದಿ ಎಲ್ಲಾ ಯಾವುದೇ ಮುಜುಗರಕ್ಕೊಳಗಾಗದೆ ನೋಡಬಹುದು. ದೊಡ್ಡಮನೆಯವರ ಹಮ್ಮುಬಿಮ್ಮುಗಳನ್ನು ಎಳೆಎಳೆಯಾಗಿ ಬಿಡಿಸಿಡುವ ಕಥೆ ನೈಜತೆಗೆ ಹತ್ತಿರವಾಗಿದೆ. ಕೊರವಂಜಿ ಪಾತ್ರ ಮಾತ್ರ ಅಪವಾದ. ಎಲ್ಲಾ ಪಾತ್ರಧಾರಿಗಳು ಹದವರಿತ ಅಭಿನಯ ನೀಡಿ ಪಾತ್ರಕ್ಕೆ ನ್ಯಾಯ ಸಲ್ಲಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ಜಯರಾಮನ ಪಾತ್ರಧಾರಿ ಪಾತ್ರಕ್ಕೆ ಪರಕಾಯ ಪ್ರವೇಶ ಮಾಡಿದಂತೆ ನಟಿಸಿದ್ದಾರೆ. ಅವರ ಕಂಚಿನ ಕಂಠದಿಂದ ಹೊರಬರುವ ಕ್ರೌರ್ಯವನ್ನು ಬಿಂಬಿಸುವ ಸಂಭಾಷಣೆಗಳು ಪರಿಣಾಮಕಾರಿಯಾಗಿವೆ. ಈ ಧಾರಾವಾಹಿ ಮುಗಿಯುವ ಮುನ್ನ ಜಯರಾಮನ ಮುಖಾರವಿಂದದಲ್ಲಿ ನಗುವನ್ನು ನೋಡುವ ಮಹದಾಸೆ ನನ್ನದು.

ಇನ್ನು ಸಾನ್ವಿ, ಪೂರ್ವಿ ಪಾತ್ರಧಾರಿಗಳು ಉತ್ಸಾಹ ಬುಗ್ಗೆ. ಪಾದರಸದಂತೆ ಓಡಾಡಿಕೊಂಡು, ಈ ವಯಸ್ಸಿನಲ್ಲಿಯೇ ಭಾವನೆಗಳನ್ನು ವ್ಯಕ್ತ ಪಡಿಸುವ ಪ್ರಬುದ್ಧತೆಗೆ ಮಾರುಹೋಗಿದ್ದೇನೆ. ಸೂರ್ಯ, ಜಾನಕಿ, ಅನು, ರೋಹಿಣಿ, ವೈದೇಹಿ, ಅಭಿರಾಮ, ಕಿರಣ ಹೀಗೆ ಎಲ್ಲಾ ಪಾತ್ರಧಾರಿಗಳ ಅಭಿನಯ ಜನ ಮೆಚ್ಚುಗೆ ಗಳಿಸಿದೆ. ಸಾಮಾಜಿಕ ಕಥೆಯಲ್ಲೂ ಕುತೂಹಲ ಹೇಗೆ ಕಾಯ್ದುಕೊಳ್ಳಬಹುದು ಎಂದು ನಿರ್ದೇಶಕ ಶರತ್ ಮಲ್ನಾಡ ಸಾಬೀತುಪಡಿಸಿದ್ದಾರೆ.

—ವೆಂಕಟೇಶ ಮುದಗಲ್, ಕಲಬುರಗಿ

## ವಾರದ ಪತ್ರ

## ಅಕ್ಷರವೂ ಗೊತ್ತಿಲ್ಲದ ಸೆಲೆಬ್ರಿಟಿ

ಕಲರ್ಸ್ ಕನ್ನಡ ವಾಹಿನಿಯ ಬಿಗ್ ಬಾಸ್ ಕಾರ್ಯಕ್ರಮದಲ್ಲಿ ಆರಂಭದಲ್ಲೇ ಕ್ಯಾಪ್ಟನ್ ಆಯ್ಕೆಯ ಸಂದರ್ಭ ಕೆಲವು ಸ್ಪರ್ಧಿಗಳು ಹೆಸರುಗಳನ್ನೂ ತಪ್ಪಾಗಿ ಬರೆದು ಮತ ಚಲಾವಣೆ ಮಾಡಿದ್ದರು.

ಕನ್ನಡ ರಾಜ್ಯೋತ್ಸವದಂದು ಸ್ಪರ್ಧಿಯೊಬ್ಬರು ಮುಖಕ್ಕೆ ಬಣ್ಣ ಬಳಿದುಕೊಂಡು ತನ್ನ ತೋರಿಕೆಯ ಕನ್ನಡಾಭಿಮಾನ ವ್ಯಕ್ತಪಡಿಸುವ ಭರದಲ್ಲಿ ಇತರ ಕನ್ನಡಿಗರನ್ನು ಕಡೆಗಣಿಸಿ ಮೂಲೋದ್ದೇಶವನ್ನೇ ಮರೆತರು. (ಪಂಚಾಯತಿ ನಡೆಸುವ ಸುದೀಪ್‌ರವರು ಇದನ್ನು ಎತ್ತಿ ಹಿಡಿದದ್ದು ಮಾತ್ರ ಪ್ರಶಂಸಾರ್ಹ ವಿಷಯವಾಗಿದೆ).

ಅಂದರೆ ಕನ್ನಡದ ಜ್ಞಾನಕ್ಕಿಂತ ಇಲ್ಲಿ ತೋರಿಕೆಯ ಪ್ರದರ್ಶನಕ್ಕೆ ಹೆಚ್ಚಿನ ಒತ್ತು ನೀಡಿ ಕನ್ನಡಿಗರ ಮತಗಳಿಸುವ ಹುನ್ನಾರ ನಡೆಯುತ್ತಿರುವುದು ನಿಚ್ಚಳವಾಗಿ ಗೋಚರಿಸುತ್ತಿದೆ! ಬಿಗ್ ಬಾಸ್ ನಂತಹ ಜನಪ್ರಿಯ ನೈಜ ಕಾರ್ಯಕ್ರಮಗಳಲ್ಲಿ ಕನ್ನಡದ ಬಗ್ಗೆ ಸ್ಪರ್ಧಿಗಳು ಕೇವಲ ಮುಖಸ್ತುತಿ ಪ್ರದರ್ಶಿಸುವ ಬದಲು ನಿಜ ನಿಲುವಿನಲ್ಲೂ ಪ್ರಾಮುಖ್ಯತೆ ನೀಡುವ ಅವಶ್ಯಕತೆ ಬಹಳವಿದೆ!

ಇದನ್ನು ವೀಕ್ಷಕರೂ ಮನಗಂಡು ಇದಕ್ಕೆ ತಕ್ಕಂತೆ ಇಂತಹ ದೇಖಾವೆಗಳ ಮಾನದಂಡ ನಿರ್ಧರಿಸಬೇಕು.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಅಪಾರ್ಥ ಅಲ್ಲ, ಅನರ್ಥ

ಚಂದನ ದೂರದರ್ಶನದ 'ಥಟ್ ಅಂತ ಹೇಳಿ' ಕಾರ್ಯಕ್ರಮ ಒಂದರಲ್ಲಿ ಇದನ್ನು ನಡೆಸಿಕೊಡುವ ಡಾ. ಸೋಮೇಶ್ವರ ಅವರು ಕಾರ್ಯಕ್ರಮದ ಪ್ರಾರಂಭದಲ್ಲಿ ಧರ್ಮಶ್ರೀ ಅಯ್ಯಂಗಾರ್ ಅವರ ಪುಸ್ತಕ 'ಅಪಾರ್ಥ ಮಂಜರಿ'ಯ ಪರಿಚಯ ಮಾಡಿಕೊಡುತ್ತ ಬಹಳ ವರ್ಷಗಳ ಹಿಂದೆ ಖ್ಯಾತ ಕನ್ನಡ ಹಾಸ್ಯ ಲೇಖಕ ನಾ. ಕಸ್ತೂರಿ ಅವರು 'ಅಪಾರ್ಥ ಕೋಶ' ಎಂಬ ಗ್ರಂಥ ರಚಿಸಿದ್ದರು ಎಂದು ಹೇಳಿದರು. ಆದರೆ ಇದು ತಪ್ಪು. ನಾ. ಕಸ್ತೂರಿ ರಚಿಸಿರುವ ಪುಸ್ತಕದ ಸರಿಯಾದ ಶೀರ್ಷಿಕೆ 'ಅನರ್ಥಕೋಶ' ಎಂದು. ತಪ್ಪು ಮಾಹಿತಿ ರವಾನೆಯಾಗಬಾರದೆಂದು ಈ ವಿವರಣೆ.

—ಡಾ.ಆರ್. ಲಕ್ಷ್ಮೀನಾರಾಯಣ ಬೆಂಗಳೂರು

## ಮ್ಯಾಚ್ ಫಿಕ್ಸಿಂಗ್ ಅನುಮಾನ!

ನಾವೆಲ್ಲರೂ ಹುಚ್ಚರಾಗಿಯೆ ಹುಟ್ಟುತ್ತೇವೆ. ಕೆಲವರು ಹಾಗೆಯೇ ಉಳಿದು ಕೊಳ್ಳುತ್ತಾರೆ ಎಂಬ ಸ್ಯಾಮುವೆಲ್ ಬೆಕೆಟ್ ಅವರ ಮಾತು ಇಂದಿಗೂ ಸತ್ಯ ಎಂಬುದನ್ನು ಬಿಗ್ ಬಾಸ್‌ನ ಪ್ರಥಮ್ ಸಾಬೀತು ಪಡಿಸುತ್ತಿದ್ದಾರೆ. ಅವರು ಸೇಫ್ ಅಂದ ತಕ್ಷಣ ಪ್ರಥಮ್ ಅವರು ನಡೆದುಕೊಂಡ ರೀತಿ ಇದಕ್ಕೆ ಸಾಕ್ಷಿ. ಆದರೂ ಅವರು ಉಳಿದುಕೊಂಡಿದ್ದಾರೆ ಎನ್ನುವುದು ಮ್ಯಾಚ್ ಫಿಕ್ಸಿಂಗ್ ಏನೋ ಎನ್ನುವ ಅನುಮಾನ! ಆದರೆ ಅತ್ಯಂತ ಭರವಸೆಯ ಆಟಗಾರ್ತಿಯವರಾದ ಶಾಲಿನಿಯವರು ಹೊರ ಬೀಳಲು (ಈಗ ಮತ್ತೆ ಸೇರ್ಪಡೆಗೊಂಡಿದ್ದಾರೆ) ಘಟನೆಯೊಂದರಲ್ಲಿ ಆದ ಪೆಟ್ಟನ್ನು ಗೊತ್ತಿದ್ದು ಗೊತ್ತಿದ್ದೂ ಪ್ರಥಮ್ ಅವರ ಮೇಲೆ ಹಾಕಿ ಓವರ್ ಆ್ಯಕ್ಟಿಂಗ್ ಮಾಡಿದ್ದೇ ಮುಳುವಾಗಿರಲಿಕ್ಕೂ ಸಾಕು. ಓಂ ಪ್ರಕಾಶ್ ಅವರಿಗೆ ಎಕ್ಕಡ ಅಂದಿದ್ದು ಹಾಗೂ ಅಲ್ಲಿರುವ ಸಹೋದರಿಯರ ಜೊತೆಗೆ ಪ್ರಥಮ್ ನಡೆದುಕೊಳ್ಳುತ್ತಿರುವ ರೀತಿ ತುಂಬಾ ನೋವು ತರುತ್ತಿದೆ.

ಬೀರಣ್ಣ ನಾಯಕ ಮೊಗಟಾ

## ಅಸಭ್ಯತನದ ಪರಮಾವಧಿ

ಝೀ ಕನ್ನಡ ವಾಹಿನಿಯಲ್ಲಿ ಪ್ರತೀ ರಾತ್ರಿ 9.30ಕ್ಕೆ ಪ್ರಸಾರವಾಗುವ 'ಗಂಗಾ' ಧಾರಾವಾಹಿಯು ಮಕ್ಕಳ ಮೇಲಿನ ದೌರ್ಜನ್ಯವನ್ನು ವೈಭವೀಕರಿಸುವಂತಿದೆ. ಈಗಿನ ಕಾಲದಲ್ಲಿ ಈ ರೀತಿಯ ಧಾರಾವಾಹಿಯ ಅಗತ್ಯ ಇದೆಯಾ ಎಂಬುದು ಪ್ರಮುಖ ಪ್ರಶ್ನೆಯಾಗಿದೆ. ಅಜ್ಜಮ್ಮನ ಅಳಿಯ ಓಂಕಾರನ ವರ್ತನೆ ಬಹಳ ಅತಿರೇಕವೆನ್ನಿಸುತ್ತದೆ. ಚಿಕ್ಕ ಹುಡುಗಿ ಗಂಗಾಳ ಮೇಲೆ ಸೇಡು ತಿರಿಸಿಕೊಳ್ಳಲು ಬಳಸುವ ಉಪಾಯಗಳು ಬಹಳ ಅಸಹ್ಯವೆನ್ನಿಸುತ್ತವೆ. ಗಂಗಾಳಿಗೆ ಬುದ್ಧಿ ಕಲಿಸುವ ಸಲುವಾಗಿ ಅವಳನ್ನು ಅಪಹರಣ ಮಾಡಿಸಿ, ವೇಶ್ಯಾಗೃಹಕ್ಕೆ ಮಾರಾಟ ಮಾಡಿದ್ದಾನೆ. ಅಪಹರಣ ಮಾಡಿ ಇಡಲು ಬೇರೆ ಯಾವ ಜಾಗವೂ ಸಿಗಲಿಲ್ಲವೆ? ಇದೆಲ್ಲಾ ಧಾರಾವಾಹಿಗೆ ಅಗತ್ಯವೇ ಎಂದು ನಿರ್ದೇಶಕರೇ ಉತ್ತರಿಸಬೇಕು.

—ಅಜಿತ್ ಶೈಣೈ, ಕಾರ್ಕಳ